ಕಥೆ



ಎಚ್.ಆರ್. ಸುರೇಶ

ಕಲೆ: ಮುರಳೀಧರ್ ರಾಥೋಡ್

# ಮನದೊಳಗಣ ಮೋಹ ಮಾಯಾವಿಯಾಗಿ ಕಾಡಿತ್ತು

'ನಾವಿನ್ನು ಹೊರಡುತ್ತೇವೆ. ನಿಮ್ಮಲ್ಲಿ ಉಳಿದುಕೊಳ್ಳಲು ನಮ್ಮ ಕುಟುಂಬದವರಿಗೆ ಅನುಕೂಲ ಮಾಡಿಕೊಟ್ಟಿರಿ, ಧನ್ಯವಾದಗಳು. ನಾವು ನಿಮಗೆ ಋಣಿಗಳಾಗಿದ್ದೇವೆ. ಈ ನಾಲ್ಕು ದಿನದಲ್ಲಿ ನಿಮ್ಮಿಂದ ನಾವು ಪಡೆದ ಉಪಚಾರ, ನೀವು ನೀಡಿದ ಆತಿಥ್ಯ ಈ ಜನ್ಮದಲ್ಲಿ ಮರೆಯಲಾಗದಂಥದ್ದು. ಅಷ್ಟು ಚೆನ್ನಾಗಿ ನೋಡಿಕೊಂಡಿರಿ. ಇದಕ್ಕಾಗಿ ನಾವು ನಿಮಗೆ ಎಷ್ಟು ಕೃತಜ್ಞತೆ ಹೇಳಿದರೂ ಕಮ್ಮಿಯೇ' ಎಂದರು ನಮ್ಮ ಹಿರಿಯ ಅಪ್ಪಯ್ಯ ಅರ್ಥಾತ್ ವಿಶ್ವನಾಥಯ್ಯ.

'ಇರಲಿ ಬಿಡಿ, ಇದರಲ್ಲೇನು ಅಂಥ ವಿಶೇಷ. ನೀವು ನಮ್ಮಲ್ಲಿರುವ ಕ್ಷೇತ್ರಗಳನ್ನು ನೋಡಲೆಂದು ಬಂದವರು. ನೀವು ಇಲ್ಲಿಗೆ ಬರುವುದು ಹೆಚ್ಚೋ ನಾವು ನಿಮ್ಮನ್ನು ಉಪಚರಿಸುವುದು ಹೆಚ್ಚೋ. ನಾವೆಲ್ಲ ಮನುಷ್ಯರು, ಬರುವಾಗ ಏನನ್ನಾದರೂ ತಂದಿದ್ದೇವೆಯೇ? ಹೋಗುವಾಗ ಏನನ್ನಾದೂ ಕೊಂಡು ಹೋಗುತ್ತೇವೆಯೇ? ಇಲ್ಲಿರುವ ನಾಲ್ಕು ದಿನದಲ್ಲಿ ನಮ್ಮ ಕೈಯಿಂದ ಆದ ಉಪಕಾರವನ್ನು ಮತ್ತೊಬ್ಬರಿಗೆ ಮಾಡಿ ಹೋಗುವುದರಲ್ಲಿ ಹೆಚ್ಚೇನಿದೆ. ಎಲ್ಲಾ ಆ ದೈವನಿಯಮ. ಆತನ ಅಪ್ಪಣೆಯಿಲ್ಲದೇ ಒಂದು ಹುಲ್ಲುಕಡ್ಡಿಯೂ ಅಲುಗದು ಎಂದು ಹೇಳುವುದಿಲ್ಲವೇ, ಇದೂ ಹಾಗೆಯೇ, ನೀವು ನಮ್ಮಲ್ಲಿ ಉಳಿದುಕೊಳ್ಳಬೇಕೆಂದು ದೈವ ನಿಯಮವಿತ್ತು ಎನ್ನಿಸುತ್ತದೆ. ಹಾಗಾಗಿ ದೇವಸ್ಥಾನದಲ್ಲಿ ನಮ್ಮ ನಿಮ್ಮ ಭೇಟಿಯಾಯಿತು. ನಾನು ಕರೆದೆ. ನೀವು ಯಾವುದೇ ಸಂಕೋಚವಿಲ್ಲದೇ ನಮ್ಮಲ್ಲಿಗೆ ಬಂದಿರಿ. ಉಳಿದುಕೊಂಡಿರಿ. ನಾವು ಮಾಡಿ ಹಾಕಿದ್ದನ್ನು ಉಂಡಿರಿ. ಸಂತೋಷಪಟ್ಟಿರಿ. ನೀವಷ್ಟೇ ಅಲ್ಲ, ನಿಮ್ಮ ಮಕ್ಕಳು-ಮೊಮ್ಮಕಳನ್ನೂ ನಿಮ್ಮೊಂದಿಗೆ ಕರೆದು ತಂದಿದ್ದಿರಿ. ಅದೇ ನನಗೆ ಸಂತೋಷ. ಇಂತಹ ಸಣ್ಣಪುಟ್ಟ ಖುಷಿಗಳಲ್ಲಿಯೇ ಜೀವನದ ಸಾರ್ಥಕತೆ ಇರುವುದು' ವೇದಾಂತಿಯಂತೆ ಹೇಳಿದರು ಅವರು.

***

ಇಷ್ಟೆಲ್ಲ ಹೇಳುವಾಗ ನಾವು ದೇವಸ್ಥಾನಕ್ಕೆ ಹೋದುದು, ಅಲ್ಲಿ ಅವರ ಮಗಳು ಉರುಳು ಸೇವೆ ಮಾಡುತ್ತಿದ್ದುದು, ಉರುಳು ಸೇವೆ ಮಾಡುತ್ತಿದ್ದ ಕಪ್ಪಗೆ ಕಬ್ಬಿಣದ ಸರಳಿನಂತೆ, ತೆಳ್ಳಗೆ ಮಲ್ಲಿಗೆಯ